# ಪಡಿ–ಮಂಗಳೂರು

2ನೇ ಅಡ್ಡರಸ್ತೆ, ಲೋವರ್ ಬೆಂದೂರ್, ಮಂಗಳೂರು – 575 002
ವೆಬ್‌ಸೈಟ್ – www.padivalored.com ದೂರವಾಣಿ – 0824–2439895

# ಸುಸ್ಥಿರ ಸಮಾಜಕ್ಕಾಗಿ ಮಕ್ಕಳ ಶಿಕ್ಷಣ, ರಕ್ಷಣೆ ಮತ್ತು ಪೋಷಣೆ
# ಸಮುದಾಯ ಜಾಗೃತಿ 2021

ಕೋವಿಡ್ 19ನಿಂದಾಗಿ ಜನಸಮುದಾಯದ ಮೇಲೆ ವಿಶೇಷವಾಗಿ ಮಕ್ಕಳ ಮೇಲೆ ಅಗಾಧವಾದ ಪರಿಣಾಮವನ್ನು ಉಂಟುಮಾಡಿದೆ. ಮಕ್ಕಳ ಶಿಕ್ಷಣ, ಆರೋಗ್ಯ ಹಾಗೂ ರಕ್ಷಣೆಗೆ ಸಂಬಂಧಿಸಿದಂತೆ ಹಲವಾರು ಮಕ್ಕಳು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇದೀಗ ಶಾಲೆಗಳ ಪುನರಾರಂಭಕ್ಕೆ ಸರಕಾರದ ಚಿಂತನೆಗಳೂ ನಡೆಯುತ್ತಿವೆ. ಶಾಲೆಗಳು ಪ್ರಾರಂಭವಾಗುವ ಮೊದಲು ಮತ್ತು ಶಾಲಾ ಪ್ರಾರಂಭದ ನಂತರದ ದಿನಗಳಲ್ಲಿ ಮಕ್ಕಳ ಶಿಕ್ಷಣದ ಜೊತೆಜೊತೆಗೆ ಆರೋಗ್ಯದ ಕಡೆಗೆ ಗಮನ ಹರಿಸುವುದು ಸ್ಥಳೀಯ ಆಡಳಿತ ಹಾಗೂ ಶಾಲಾಭಿವೃದ್ಧಿ ಸಮಿತಿಗಳ ಜವಾಬ್ದಾರಿಯಾಗಿದೆ. ಶಾಲೆಗಳಲ್ಲಿ ಮಕ್ಕಳಿಗೆ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಹಾಗೂ ಶುದ್ಧ ಕುಡಿಯುವ ನೀರಿನ ಸೌಲಭ್ಯ ನೈರ್ಮಲೀಕರಣದ ಸೌಲಭ್ಯಗಳನ್ನು ಹೊಂದಿರುವ ಶೌಚಾಲಯಗಳು, ಕೋವಿಡ್ ಸೋಂಕು ಹರಡದಂತೆ ಮಾಸ್ಕ್ ಬಳಕೆ, ದೈಹಿಕ ಅಂತರಗಳನ್ನು ಕಾಪಾಡಿಕೊಳ್ಳುವಂತಹ ಕಲಿಕಾ ತರಗತಿ ಕೋಣೆಗಳು, ಆಹಾರ ಸೇವನೆಗೆ ಮೊದಲು ಕೈಕಾಲುಗಳನ್ನು ಸ್ವಚ್ಛವಾಗಿರಿಸುವಂತೆ ಸಾಕಷ್ಟು ಪ್ರಮಾಣದಲ್ಲಿ ನೀರಿನ ಸೌಲಭ್ಯದೊಂದಿಗೆ ಸಾಬೂನು ಸ್ಯಾನಿಟೈಸರ್‌ಗಳ ಒದಗಣೆ, ಇತ್ಯಾದಿಗಳ ಬಗ್ಗೆ ಗಮನ ಹರಿಸಿ, ಮಕ್ಕಳಿಗೆ ಮಗುಸ್ನೇಹಿ ವಾತಾವರಣವನ್ನು ಶಾಲೆಯಲ್ಲಿ ಕಲ್ಪಿಸುವುದು ಅತೀ ಅಗತ್ಯವಾಗಿದೆ. ಹಾಗಾಗಿ ಶಾಲಾಭಿವೃದ್ಧಿ ಸಮಿತಿಗಳು ಸರಕಾರದ ಸಹಕಾರವನ್ನು ಪಡೆಯುವದರೊಂದಿಗೆ ಸಮುದಾಯದ ಸಹಬಾಗಿತ್ವದಲ್ಲಿ ಕಾರ್ಯಾಚರಿಸಬೇಕಾಗಿದೆ. ಜೊತೆಜೊತೆಗೆ ಸ್ಥಳೀಯ ಸರಕಾರಗಳು ಈ ಅಂಶಗಳು ಸುಸೂತ್ರವಾಗಿ ನಡೆಯುವಂತೆ ಕಾಲಕಾಲಕ್ಕೆ ಮೇಲ್ವಿಚಾರಣೆ ನಡೆಸುವುದು ಮುಖ್ಯವಾಗಿದೆ. ಯಾಕಂದರೆ, ಕೋವಿಡ್ 19ರಂತಹ ಸಾಂಕ್ರಾಮಿಕ ರೋಗಗಳು ಉದ್ಭವಿಸುವ ಸಂದರ್ಭದಲ್ಲಿ ಹಲವಾರು ಕುಟುಂಬಗಳು ಆರ್ಥಿಕ, ಸಾಮಾಜಿಕ, ಮಾನಸಿಕ ಹಾಗೂ ದೈಹಿಕ ಸಂಕಷ್ಟಕ್ಕೆ ಒಳಗಾಗುತ್ತಿರುವಾಗ ಇವುಗಳ ಪರಿಣಾಮ ನೇರವಾಗಿ ಮಕ್ಕಳ ಮೇಲೆಯೇ ಆಗುವುದು. ಹೀಗಾಗಿ ಮಕ್ಕಳು ಶಾಲೆ ಬಿಡುವುದು, ಭಿಕ್ಷಾಟಣೆ ಮಾಡುವುದು, ಬಾಲ್ಯವಿವಾಹದಂತಹ ಸಾಮಾಜಿಕ ಪಿಡುಗುಗಳಿಗೆ ಗುರಿಯಾಗುತ್ತಾರೆ. ಅದರಲ್ಲೂ ಮುಖ್ಯವಾಗಿ ವಿಶೇಷ ಅಗತ್ಯವುಳ್ಳ ಮಕ್ಕಳು, ಹೆಣ್ಣುಮಕ್ಕಳು, ವಲಸೆ ಕಾರ್ಮಿಕರ ಮಕ್ಕಳು, ಶಾಲೆ ಬಿಟ್ಟ ಮಕ್ಕಳು, ಶಾಲೆಗೆ ಹೋಗದ ಮಕ್ಕಳು, ಬಾಲಕಾರ್ಮಿಕ ಮಕ್ಕಳು ಸಂಕಷ್ಟಕ್ಕೀಡಾಗುತ್ತಿದ್ದಾರೆ. ಇವೆಲ್ಲವನ್ನೂ ಮುಖ್ಯವಾಗಿ ಗಮನದಲ್ಲಿರಿಸಿ ಸಮುದಾಯವು ಸಂಘಟನಾ ಸ್ವರೂಪವಾಗಿ ಚಿಂತನೆ ನಡೆಸಬೇಕಾಗಿದೆ.

ಇಂತಹ ಪರಿಸ್ಥಿತಿಯಿಂದ ಮಕ್ಕಳನ್ನು ಕಾಪಾಡಲು ಈಗಾಗಲೇ ಪಂಚಾಯತ್ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಶಿಕ್ಷಣ ಪಡೆ ಸಮಿತಿಗಳು, ಸಾಮಾಜಿಕ ನ್ಯಾಯ ಸಮಿತಿ, ಮಕ್ಕಳ ಮತ್ತು ಮಹಿಳೆಯರ ರಕ್ಷಣಾ ಸಮಿತಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಗಳು ತಮ್ಮ ಆಡಳಿತ ವ್ಯಾಪ್ತಿಯ ಭೌಗೋಳಿಕ ಪ್ರದೇಶವನ್ನು ಸುಸ್ಥಿರ ಮಗುಸ್ನೇಹಿ ಸಮಾಜವನ್ನಾಗಿ ನಿರ್ಮಿಸುವಲ್ಲಿ ಪಣತೊಡಗಬೇಕಾಗಿದೆ.

ಮಕ್ಕಳ ರಕ್ಷಣೆ ನಮ್ಮ ಮುಂದಿರುವ ದೊಡ್ಡದಾದ ಸವಾಲು. ಮಕ್ಕಳು ಅವಲಂಬಿತರಾಗಿರುವುದರಿಂದ ಅವರ ದುರ್ಬಲತೆ, ಬಿಕ್ಕಟ್ಟು ಬವಣೆಗಳನ್ನು ಸಮುದಾಯವು ಸಮಗ್ರವಾಗಿ ಅರ್ಥೈಸಿಕೊಂಡು ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಚೌಕಟ್ಟನ್ನು ಸರಿಯಾಗಿ ತಿಳಿದುಕೊಳ್ಳುತ್ತಾ ಮಕ್ಕಳ ನಾಲ್ಕೂ ಹಕ್ಕುಗಳನ್ನು ಅಂದರೆ, ಬದುಕುಳಿಯುವ, ಅಭಿವೃದ್ಧಿ ಹೊಂದುವ, ರಕ್ಷಣೆ ಪಡೆಯುವ ಹಾಗೂ ಭಾಗವಹಿಸುವಿಕೆಯ ಹಕ್ಕುಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗಿದೆ. ಶಿಕ್ಷಣ ಹಕ್ಕು ಕಾಯಿದೆ 2009 ಹಾಗೂ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಹಲವಾರು ಕಾನೂನು ಕಾಯಿದೆಗಳು ನಮ್ಮ ದೇಶದಲ್ಲಿ ಈಗಾಗಲೇ ಜಾರಿಯಲ್ಲಿದೆ. ಈ ಕಾನೂನು ಮತ್ತು ನಿಯಮಗಳು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಸ್ಥಳೀಯ ಮಟ್ಟದಲ್ಲಿ ಸ್ಥಳೀಯ ಸರಕಾರಗಳು, ಸ್ಥಳೀಯ ಪ್ರಾಧಿಕಾರಗಳು ಸಮರ್ಥವಾಗಿ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಪಡಿ ಸಂಸ್ಥೆಯು ಕರ್ನಾಟಕ ರಾಜ್ಯಾದ್ಯಂತ ಆಯ್ದ ಸರಕಾರಿ ಶಾಲೆಗಳು ಮತ್ತು ಸ್ಥಳೀಯ ಸರಕಾರಗಳೊಂದಿಗೆ ಮಗು ಸ್ನೇಹಿ ಸಮುದಾಯ ಯೋಜನೆಯನ್ನು 2020–2023 ಅವಧಿಯಲ್ಲಿ ಅನುಷ್ಠಾನಿಸುತ್ತಿದೆ. ಈ ಯೋಜನೆಯ ಅನುಷ್ಠಾನದ ಪ್ರಕ್ರಿಯೆಯಲ್ಲಿ ಸಮುದಾಯದ ಸಹಕಾರ–ಸಹಭಾಗಿತ್ವ ಹಾಗೂ ಬೆಂಬಲ ಅತೀ ಅಗತ್ಯವಾಗಿದೆ.

ಯೋಜನಾ ಅನುಷ್ಠಾನದ ಅಂಗವಾಗಿ ಸಮುದಾಯದ ಜಾಗೃತಿ ಬಳಕೆಗಾಗಿ ಮಕ್ಕಳ ಶಿಕ್ಷಣ, ರಕ್ಷಣೆ ಮತ್ತು ಪೋಷಣೆಗೆ ಸಂಬಂಧಿಸಿದ ಮಾಹಿತಿಗಳನ್ನೊಳಗೊಂಡ 2021ರ ಕ್ಯಾಲೆಂಡರ್ ಒಂದನ್ನು ಹೊರತರುತ್ತಿದ್ದೇವೆ. ತಾವು ತನು ಮನ ಧನದೊಂದಿಗೆ ಕೈ ಜೋಡಿಸುವ ಮೂಲಕ ಮಗುಸ್ನೇಹಿ ಸಮುದಾಯ ನಿರ್ಮಾಣಕ್ಕಾಗಿ ಕೈ ಜೋಡಿಸಬೇಕಾಗಿ ಈ ಮೂಲಕ ಕೋರಿಕೆ.


**25 GLORIOUS YEARS (1993-2018) IN THE SERVICE OF CHILDREN, THROUGH VALUE-BASED EDUCATION AND PROTECTION OF CHILD RIGHTS**


## PROGRAMMES UNDERTAKEN FOR CHILD FRIENDLY SOCIETY
### through the Support of Community
**ON ACCOUNT OF SILVER JUBILEE OF PADI**


- Initiation of 'Centre for Training & Research on Child Protection & Quality Education'
- Empowerment of 'Education Resource Centers' to work towards Quality Education
- Programmes to Ensure implementation of Right to Education through 'Community Participation and School Development Monitoring Committee'
- Campaigns on 'Child Rights Cultural Groups' (CRCG)
- Training Packages of 'Child related Rules & Acts'.
- Support A Child'– Programme
- Reaching 'Children in Distress'
- 'Online Safety –Online Abuse & Drug abuse' – Awareness Programme
- Workshop Packages for 'Child Friendly Authorities, Schools and Panchayaths'
- Production of 'IEC' (Information, Education, Communication)-Materials on quality Education and Child Protection
- Manual on 'Child Rights' to Conscious Society
- 'Study & Exposures' to education development fields and trainings to academic practitioners.

- ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಗುಣಾತ್ಮಕತೆಯ ಶಿಕ್ಷಣಕ್ಕಾಗಿ 'ಸಂಶೋಧನಾ ಮತ್ತು ತರಬೇತಿ ಕೇಂದ್ರ'
- ಗುಣಾತ್ಮಕ ಶಿಕ್ಷಣಕ್ಕಾಗಿ 'ಶಿಕ್ಷಣ ಸಂಪನ್ಮೂಲ ಕೇಂದ್ರ'ಗಳ ಸಬಲೀಕರಣ
- ಶಿಕ್ಷಣ ಹಕ್ಕಿನ ಖಾತರಿಗಾಗಿ 'ಸಮುದಾಯದ ಸಹಭಾಗಿತ್ವ ಮತ್ತು ಶಾಲಾಭಿವೃದ್ಧಿ ಸಮಿತಿಗಳು'
- 'ಮಕ್ಕಳ ಹಕ್ಕುಗಳ ರಂಗತಂಡ'–ಸಮುದಾಯ ಜಾಗೃತಿ ಅಭಿಯಾನ
- ಮಗು ಸಂಬಂಧಿ 'ಕಾನೂನು ಮತ್ತು ಕಾಯಿದೆಗಳ ತರಬೇತಿ' ಪ್ಯಾಕೇಜ್
- 'ಮಗುವಿಗಾಗಿ ನೆರವು'ಯೋಜನೆ
- ಸಂಕಷ್ಟದಲ್ಲಿರುವ 'ಮಕ್ಕಳ ತುರ್ತು ರಕ್ಷಣೆ'
- ಜನಜಾಗೃತಿ ಕಾರ್ಯಕ್ರಮ
- 'ಮಗುಸ್ನೇಹಿ ಪ್ರಾಧಿಕಾರಗಳು, ಶಾಲೆ ಮತ್ತು ಪಂಚಾಯತ್'–ಕಾರ್ಯಾಗಾರಗಳ ಪ್ಯಾಕೇಜ್
- ಗುಣಾತ್ಮಕ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳ'ಮಾಹಿತಿ, ಶಿಕ್ಷಣ, ಸಂಪರ್ಕ ಪರಿಕರಗಳ ತಯಾರಿ'
- ಜಾಗೃತ ಸಮಾಜಕ್ಕಾಗಿ 'ಮಕ್ಕಳ ಹಕ್ಕುಗಳು' ಕೈಪಿಡಿ'
- ಶೈಕ್ಷಣಿಕ ಅಧ್ಯಯನಕ್ಕಾಗಿ 'ಶೈಕ್ಷಣಿಕ ಕ್ಷೇತ್ರ ಭೇಟಿ ಮತ್ತು ತರಬೇತಿ'

## "SUPPORT GENEROUSLY"








# ಕೋವಿಡ್ 19
# ಹೆದರಬೇಡಿ, ಜಾಗೃತರಾಗಿ

## ಸೂಚನೆಗಳನ್ನು ಪಾಲಿಸಿ ಕೊರೋನಾ ಹರಡುವುದನ್ನು ತಡೆಗಟ್ಟಿ





- ಕೆಮ್ಮುವಾಗ ಅಥವಾ ಸೀನುವಾಗ ಮುಖಕ್ಕೆ ಕರವಸ್ತ್ರ ಅಥವಾ ಬಟ್ಟೆ ಅಡ್ಡ ಹಿಡಿಯಿರಿ ಅಥವಾ ನಿಮ್ಮ ಮುಂಗೈಯನ್ನು ಅಡ್ಡ ಹಿಡಿಯಿರಿ.

- ನಿರಂತರವಾಗಿ ಸಾಬೂನು ಅಥವಾ ಹ್ಯಾಂಡ್‌ವಾಶ್ ಬಳಸಿ ಕೈಗಳನ್ನು ತೊಳೆಯಿರಿ. ಇಲ್ಲವೇ ಸಾನಿಟೈಸರ್ ಬಳಸಿ ಕೈಗಳನ್ನು ಸ್ವಚ್ಛಗೊಳಿಸಿ





- ನೀವು ಬೇರೆಯವರ ಜೊತೆಗಿರುವಾಗ ಮಾಸ್ಕ್‌ಗಳನ್ನು ಬಳಸಿ. ಬಾಯಿ ಹಾಗೂ ಮೂಗು ಮುಚ್ಚುವಂತೆ ಸರಿಯಾದ ಕ್ರಮದಲ್ಲಿ ಹಾಕಿಕೊಳ್ಳಿ. ಕೊರೋನಾ ಹರಡುವ ಸಾಧ್ಯತೆಯಿಂದ ಮುಕ್ತರಾಗಿ

- ಮೂಗು ಮತ್ತು ಬಾಯಿಯನ್ನು ಪದೇ ಪದೇ ಮುಟ್ಟಬೇಡಿ. ನಿಮ್ಮ ಕೈ ಸ್ವಚ್ಛವಾಗಿಲ್ಲದಿರುವಾಗ ಸೋಂಕು ಹರಡುವ ಸಾಧ್ಯತೆಯಿದೆ.






- ಸಾರ್ವಜನಿಕ ಸ್ಥಳಗಳಲ್ಲಿ ಪರಸ್ಪರರ ಮಧ್ಯೆ ಕನಿಷ್ಟ ಎರಡು ಮೀಟರ್ ದೈಹಿಕ ಅಂತರ ಕಾಪಾಡಿ.

- ಜನಸಂದಣಿ ಪ್ರದೇಶಗಳಲ್ಲಿ ಓಡಾಡುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ. ಅನಗತ್ಯವಾಗಿ ಹೊರಗೆ ಹೋಗುವುದನ್ನು ತಪ್ಪಿಸಿ

- ಕೆಮ್ಮು, ಜ್ವರ, ಉಸಿರಾಟದ ತೊಂದರೆ ಅಥವಾ ಅನಾರೋಗ್ಯ ಲಕ್ಷಣ ಕಂಡುಬಂದಲ್ಲಿ ತಕ್ಷಣ ಹತ್ತಿರದ ವೈದ್ಯರನ್ನು ಭೇಟಿಯಾಗಿ ಸಲಹೆ ಪಡೆಯಿರಿ


ಪಡಿ–ಮಂಗಳೂರು, 2ನೇ ಅಡ್ಡರಸ್ತೆ, ಲೋವರ್ ಬೆಂದೂರ್, ಮಂಗಳೂರು – 575 002
ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ: ವೆಬ್‌ಸೈಟ್ – www.padivalored.com ದೂರವಾಣಿ – 0824–2439895


CHILD LINE 1098 NIGHT & DAY

### ಜನವರಿ JANUARY 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| 31 Street Children's Day | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 Makara Sankramana | 15 | 6 |
| 17 | 18 | 19 | 20 | 21 | 22 | 23 |
| 24 | 25 | 26 Republic Day | 27 | 28 | 29 | 30 |

### ಫೆಬ್ರವರಿ FEBRUARY 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 International Childhood Cancer Day | 16 | 17 | 18 | 19 | 20 World day of Social Justice |
| 21 | 22 | 23 | 24 | 25 | 26 | 27 |
| 28 | | | | | | |

ಪರಿಕಲ್ಪನೆ : ಪಡಿ–ವೆಲೋರೆಡ್




ಪಡಿ–ಮಂಗಳೂರು, 2ನೇ ಅಡ್ಡರಸ್ತೆ, ಲೋವರ್ ಬೆಂದೂರ್, ಮಂಗಳೂರು – 575 002
ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ: ವೆಬ್‌ಸೈಟ್ – www.padivalored.com ದೂರವಾಣಿ – 0824–2439895

CHILD LINE 1098 NIGHT & DAY

## ಮಾರ್ಚ್ MARCH 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 International women's day | 9 | 10 | 11 Mahashivarathri | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಎಪ್ರಿಲ್ APRIL 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| | | | | 1 | 2 Good Friday International children's Book Day | 3 |
| 4 | 5 | 6 | 7 World health day | 8 | 9 | 10 |
| 11 | 12 | 13 Chandramana Ugadi | 14 Dr. Ambedkar Jayanthi | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 World Day for Safety and Health At Work | 29 | 30 | |

ಪರಿಕಲ್ಪನೆ : ಪಡಿ–ವೆಲೊರೆಡ್

# ಮಕ್ಕಳ ರಕ್ಷಣೆಗೆ ಮುಂದಾಗೋಣ
# ಸದೃಢ ಸಮಾಜ ನಿರ್ಮಿಸೋಣ

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು

ಜಿಲ್ಲಾ ಬಾಲ ನ್ಯಾಯಮಂಡಳಿಗಳು

## ಮಕ್ಕಳ ರಕ್ಷಣೆಗಾಗಿ ಇರುವ ಮಕ್ಕಳ ರಕ್ಷಣಾ ವ್ಯವಸ್ಥೆಗಳು ಮತ್ತು ಪ್ರಾಧಿಕಾರ

- ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ (ಐಸಿಪಿಎಸ್)
- ಜಿಲ್ಲಾ ಮಕ್ಕಳ ರಕ್ಷಣಾ ಘಟಕ
- ಮಕ್ಕಳ ಸಹಾಯವಾಣಿ-1098
- ಜಿಲ್ಲಾ ಮಕ್ಕಳ ವಿಶೇಷ ಪೋಲಿಸ್ ಘಟಕ
- ಪ್ರತೀ ಅರಕ್ಷಕ ಠಾಣಾ ಹಂತದ-ಮಗುಸ್ನೇಹಿ ಪೋಲಿಸ್ ಕೋಶ
- ಬಾಲ್ಯವಿವಾಹ ನಿಷೇದಾಧಿಕಾರಿಗಳು
- ತಾಲೂಕು ಮಟ್ಟದ ಮಕ್ಕಳ ರಕ್ಷಣಾ ಘಟಕ

ಸ್ಥಳೀಯ ಮಟ್ಟ

- ಶಾಲಾ ಎಸ್‌ಡಿಎಂಸಿ
- ಶಾಲಾ ಹಂತದ ಮಕ್ಕಳ ಸುರಕ್ಷಾ ಸಮಿತಿ
- ಗ್ರಾಮ ಪಂಚಾಯತ್ ಮಟ್ಟದ ಮಕ್ಕಳ ರಕ್ಷಣಾ ಸಮಿತಿ
- ಗ್ರಾಮ ಪಂಚಾಯತ್ ಮಟ್ಟದ ಸಾಮಾಜಿಕ ನ್ಯಾಯ ಸಮಿತಿ
- ಗ್ರಾಮ ಪಂಚಾಯತ್ ಮಟ್ಟದ ಶಿಕ್ಷಣ ಪಡೆ
- ಅಂಗನವಾಡಿ-ಬಾಲ ವಿಕಾಸ ಸಮಿತಿ

- ಜಿಲ್ಲಾಧಿಕಾರಿಗಳು
- ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್
- ಜಿಲ್ಲಾ ಪೋಲಿಸ್ ಆಯುಕ್ತರು
- ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
- ಜಿಲ್ಲಾ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ
- ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
- ಸಹಾಯಕ ಕಾರ್ಮಿಕ ಆಯುಕ್ತರು/ ಯೋಜನಾ ನಿರ್ದೇಶಕರು ಕಾರ್ಮಿಕ ಇಲಾಖೆ/ಚೈಲ್ಡ್ ಲೇಬರ್
- ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಸಮಾಜ ಕಲ್ಯಾಣ ಇಲಾಖೆ
- ಜಿಲ್ಲಾ ಆರೋಗ್ಯಾಧಿಕಾರಿಗಳು ಸಾರ್ವಜನಿಕ ಆರೋಗ್ಯ ಇಲಾಖೆ

ಪಡಿ-ಮಂಗಳೂರು, 2ನೇ ಅಡ್ಡರಸ್ತೆ, ಲೋವರ್ ಬೆಂದೂರ್, ಮಂಗಳೂರು – 575 002
ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ: ವೆಬ್‌ಸೈಟ್ – www.padivalored.com ದೂರವಾಣಿ – 0824-2439895

CHILD LINE 1098 NIGHT & DAY

### ಮೇ MAY 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| 30 | 31 World No-Tobacco Day (WHO) | | | | | 1 May Day |
| 2 Mahaveera jayanthi | 3 | 4 | 5 | 6 | 7 | 8 |
| 9 | 10 | 11 | 12 | 13 | 14 Ramzan | 15 Basava Jayanthi |
| 16 | 17 International Child Helpline Day | 18 | 19 | 20 | 21 | 22 |
| 23 | 24 | 25 Missing Children's Day | 26 Budda Poornima | 27 | 28 | 29 |

### ಜೂನ್ JUNE 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| | | 1 | 2 | 3 | International Day of Innocent 4 Children victims of Aggression | 5 |
| 6 | 7 | 8 | 9 | 10 | 11 | 12 World Day against Child Labour |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

ಪರಿಕಲ್ಪನೆ : ಪಡಿ-ವೆಲೊರೆಡ್

# ಮಗುಸ್ನೇಹಿ
# ಸಮುದಾಯದಲ್ಲಿ ಮಕ್ಕಳು




ಮಕ್ಕಳ ಬದುಕು, ರಕ್ಷಣೆ, ಭಾಗವಹಿಸುವಿಕೆ ಮತ್ತು ವಿಕಾಸ ಹೊಂದುವ ಹಕ್ಕನ್ನು ಸಂತಸದಿಂದ ಮಕ್ಕಳು ಅನುಭವಿಸಲು ಮಕ್ಕಳಿಗಾಗಿಯೇ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಜಾರಿಗೆ ತಂದು ಇದಕ್ಕೆ ಭಾರತ ಸರಕಾರ ಸಹಿ ಹಾಕಿ ತನ್ನ ಬದ್ಧತೆಯನ್ನು ವ್ಯಕ್ತಪಡಿಸಿದೆ. ಮಕ್ಕಳ ರಕ್ಷಣೆಗಾಗಿಯೇ ಬೇರೆ ಬೇರೆ ಕಾನೂನು/ಕಾಯಿದೆ/ ನೀತಿಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಇಲಾಖೆ/ಸಂಸ್ಥೆಗಳ ಮೂಲಕ ವ್ಯವಸ್ಥೆಗೊಳಿಸಲಾಗಿದೆ.


ಪಡಿ–ಮಂಗಳೂರು, 2ನೇ ಅಡ್ಡರಸ್ತೆ, ಲೋವರ್ ಬೆಂದೂರ್, ಮಂಗಳೂರು – 575 002
ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ: ವೆಬ್‌ಸೈಟ್ – www.padivalored.com ದೂರವಾಣಿ – 0824–2439895


CHILD LINE 1098 NIGHT & DAY

## ಜುಲೈ JULY 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 Bakrid | 22 | 23 | 24 |
| 25 | 26 | 27 | 28 | 29 | 30 | 31 |

## ಆಗಸ್ಟ್ AUGUST 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 Independence Day | 16 | 17 | 18 | 19 World Humanitarian Day | 20 Moharum | 21 Onam |
| 22 Krishna Janmastami | 23 | 24 | 25 | 26 | 27 | 28 |
| 29 | 30 | 31 | | | | |

ಪರಿಕಲ್ಪನೆ : ಪಡಿ–ವೆಲೊರೆಡ್



# ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ 2012 ಮತ್ತು ಅದರ ತಿದ್ದುಪಡಿ 2019

## ಮಗು ಎಂದರೆ 18 ವರ್ಷದ ಒಳಗೆ ಬರುವ ವ್ಯಕ್ತಿ (ಹೆಣ್ಣು / ಗಂಡು)



| ಅಪರಾಧಗಳು | ಸರಳೀಕೃತ ವ್ಯಾಖ್ಯಾನ | ಶಿಕ್ಷೆ |
|---|---|---|
| 1. ಭೇದಕ ಲೈಂಗಿಕ/ಹಲ್ಲೆ ದೌರ್ಜನ್ಯ (ಸೆಕ್ಷನ್ 3) | ಯಾವುದೇ ಒಂದು ಮಗುವಿನ ಬಾಯಿ, ಯೋನಿ, ಗುದದ್ವಾರಕ್ಕೆ ಶಿಶ್ನ ಅಥವಾ ಯಾವುದೇ ಇತರ ವಸ್ತುಗಳನ್ನು ಅಥವಾ ದೇಹದ ಯಾವುದೇ ಭಾಗವನ್ನು ದುರುಪಯೋಗಪಡಿಸಿ, ತೂರಿಸುವಿಕೆಯನ್ನು ಸಾಧ್ಯ ಮಾಡಿದರೆ ಅದು "ಭೇದಕ ಲೈಂಗಿಕ ಹಲ್ಲೆ/ದೌರ್ಜನ್ಯ" ಎನಿಸಿಕೊಳ್ಳುತ್ತದೆ. | 10 ವರ್ಷಕ್ಕೆ ಕಡಿಮೆಯಲ್ಲದ ಆದರೆ ಶಿಕ್ಷೆಯನ್ನು ಜೀವಾವಧಿಗೂ ವಿಸ್ತರಿಸಬಹುದು ಮತ್ತು ದಂಡಕ್ಕೆ ಹೊಣೆಗಾರರರು. ಸೆಕ್ಷನ್ 4(1)(a) |
| 2. ತೀವ್ರ ಭೇದಕ ಲೈಂಗಿಕ ದೌರ್ಜನ್ಯ (ಸೆಕ್ಷನ್ 5) | ಭೇದಕ ಲೈಂಗಿಕ/ಹಲ್ಲೆ/ದೌರ್ಜನ್ಯ(ಸೆಕ್ಷನ್ 3) ಅಪರಾಧವನ್ನು ಅಧಿಕಾರದಲ್ಲಿರುವ ವ್ಯಕ್ತಿಗಳು, ನಂಬಿಗಸ್ಥ ವ್ಯಕ್ತಿಗಳು ಅಪರಾಧ ಎಸಗಿದರೆ ಅದನ್ನು ತೀವ್ರ ಭೇದಕ "ಲೈಂಗಿಕ ಆಕ್ರಮಣ" ಎನ್ನುವರು | 20 ವರ್ಷಕ್ಕೆ ಕಡಿಮೆಯಲ್ಲದ, ಆದರೆ ದಂಡದೊಂದಿಗೆ ಜೀವಾವಧಿಗೆ ವಿಸ್ತರಿಸಬಹುದು ಸೆಕ್ಷನ್ 6 (1) |
| 3. ಲೈಂಗಿಕ ದೌರ್ಜನ್ಯ (ಸೆಕ್ಷನ್ 7) | ಲೈಂಗಿಕ ಉದ್ದೇಶದಿಂದ ಯಾವುದೇ ವ್ಯಕ್ತಿಯು ಮಗುವಿನ ಯೋನಿ, ಶಿಶ್ನ, ಮೊಲೆಗಳನ್ನು ಸ್ಪರ್ಶಿಸುವುದು ಅಥವಾ ಮಕ್ಕಳಿಂದ ತನ್ನ ದೇಹದ ಭಾಗಗಳನ್ನು ಮುಟ್ಟಿಸಿಕೊಳ್ಳುವುದನ್ನು "ಲೈಂಗಿಕ ದೌರ್ಜನ್ಯ" ಎಂದು ಕರೆಯಲಾಗುವುದು. | 3 ವರ್ಷದಿಂದ 5 ವರ್ಷಕ್ಕೆ ಕಡಿಮೆಯಲ್ಲದ ದಂಡದೊಂದಿಗೆ (ಸೆಕ್ಷನ್ 8) |
| 4. ತೀವ್ರ ಲೈಂಗಿಕ ದೌರ್ಜನ್ಯ (ಸೆಕ್ಷನ್ 9) | ಯಾವುದೇ ವ್ಯಕ್ತಿ ಅಧಿಕಾರದ ಪ್ರಭಾವ ಬೀರಿ ಲೈಂಗಿಕ ದೌರ್ಜನ್ಯವೆಸಗಿದರೆ ಈ ಅಪರಾಧವು "ತೀವ್ರ ಲೈಂಗಿಕ ದೌರ್ಜನ್ಯ" ಎಂದು ಪರಿಗಣಿಸಲ್ಪಡುತ್ತದೆ. | 5 ವರ್ಷದಿಂದ 7 ವರ್ಷಕ್ಕೆ ದಂಡದೊಂದಿಗೆ (ಸೆಕ್ಷನ್ 10) |
| 5. ಲೈಂಗಿಕ ಕಿರುಕುಳ (ಸೆಕ್ಷನ್ 11) | ಲೈಂಗಿಕ ಉದ್ದೇಶದಿಂದ ಶಬ್ದ ಮಾಡುವ ಮೂಲಕ ಯಾವುದೇ ಮಗುವಿನ ಗಮನ ಸೆಳೆದರೆ, ಅಸಭ್ಯವಾಗಿ ವರ್ತಿಸಿದರೆ, ತನ್ನ ದೇಹ ಪ್ರದರ್ಶನ ಮಾಡಿದರೆ, ಮಗುವನ್ನು ನೇರವಾಗಿ ಅಥವಾ ವಿದ್ಯುನ್ಮಾನ ಮಾಧ್ಯಮದ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರೆ ಅಥವಾ ಮಗುವಿಗೆ ಭಯ ಹುಟ್ಟಿಸಿದರೆ ಅದನ್ನು "ಲೈಂಗಿಕ ಕಿರುಕುಳ" ಎಂದು ಕರೆಯಲಾಗುವುದು. | 3 ವರ್ಷ ಜೈಲು ಶಿಕ್ಷೆ ದಂಡದೊಂದಿಗೆ (ಸೆಕ್ಷನ್ 12) |
| 6. ಮಕ್ಕಳನ್ನು ಅಶ್ಲೀಲ ಚಿತ್ರೀಕರಣಕ್ಕೆ ಬಳಸುವುದು ಸೆಕ್ಷನ್ 14(a)(1)(da) | ಮಗುವನ್ನು ಯಾವುದೇ ರೀತಿಯ ಆಶ್ಲೀಲ ಚಿತ್ರಗಳ ರಚನೆಗೆ ಬಳಸುವುದು, ಮಗುವಿನ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸುವುದು ಮತ್ತು ಮಾರುವುದು. | 5 ವರ್ಷಕ್ಕೆ ಕಡಿಮೆಯಲ್ಲದ ಜೈಲು ಮತ್ತು ದಂಡಕ್ಕೆ ಹೊಣೆಯಾಗುವರು. ಅಪರಾಧವು ಮರುಕಳಿಸಿದ ಪಕ್ಷದಲ್ಲಿ 7 ವರ್ಷಕ್ಕೆ ಕಡಿಮೆಯಲ್ಲದ ಜೈಲು ಮತ್ತು ದಂಡದ ಹೊಣೆ. ಸೆಕ್ಷನ್ 14 (1) |
| | ಯಾವುದೇ ವ್ಯಕ್ತಿಯು ಮಗು ಯಾ ಮಕ್ಕಳನ್ನು ಅಶ್ಲೀಲ ಚಿತ್ರಗಳ ಉದ್ದೇಶಕ್ಕಾಗಿ 14(1) ರ ಪ್ರಕಾರ ಸೆಕ್ಷನ್ 3 ಯಾ 5 ಯಾ 7 ಯಾ 9 ರಲ್ಲಿ ತಿಳಿಸಿದಂತೆ ಅಂತಹ ಅಪರಾದಗಳಲ್ಲಿ ಬಾಗಿಗಳಾಗುವುದು. | ಇವರು ಸೆಕ್ಷನ್ 4, ಸೆಕ್ಷನ್ 6, ಸೆಕ್ಷನ್ 8 ಮತ್ತು ಸೆಕ್ಷನ್ 10ರಂತೆ ಕ್ರಮವಾಗಿ ಮತ್ತು ಸೆಕ್ಷನ್ 14(1)ರ ಜೊತೆಗೆ ಶಿಕ್ಷಾರ್ಹರಾಗುತ್ತಾರೆ |
| 7. ಮಗುವಿನ ಅಶ್ಲೀಲ ಚಿತ್ರೀಕರಣದ ಪರಿಕರಗಳನ್ನು ಮಾಡುವುದು, ಇತರರಿಗೆ ಕಳುಹಿಸುವ ಉದ್ದೇಶದಿಂದ ಸಂಗ್ರಹಿಸಿಡುವುದು, ನಾಶಪಡಿಸದಿರುವುದು ಮತ್ತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಈ ಕುರಿತಾಗಿ ತಿಳಿಸದಿರುವುದು.-ಸೆಕ್ಷನ್ 15 (1) | ಯಾವುದೇ ವ್ಯಕ್ತಿಯು ಮಕ್ಕಳ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸುವುದು, ಅವುಗಳನ್ನು ಹೊಂದಿರುವುದು. ಯಾವುದೇ ರೀತಿಯಲ್ಲಿ ಮಗುವನ್ನು ಅಶ್ಲೀಲವಾಗಿ ಬಳಸುವುದು, ಅವುಗಳನ್ನು ಅಳಿಸದಿರುವುದು ಮತ್ತು ನಾಶಪಡಿಸದಿರುವುದು ಅಥವಾ ಸಂಬಂಧಿಸಿದ ಪ್ರಾಧಿಕಾರಗಳಿಗೆ ತಿಳಿಸದಿರುವುದು | ರೂ. 5000ಕ್ಕೆ ಕಡಿಮೆ ಇರದ ದಂಡ, 2ನೇ ಬಾರಿಯೂ ಅಪರಾಧವು ಮರುಕಳಿಸಿದರೆ ರೂ 10000ಕ್ಕೆ ಕಡಿಮೆ ಇರದ ದಂಡ |
| 8. ಮಗುವನ್ನು ಒಳಗೊಳ್ಳಿಸಿ, ಅಶ್ಲೀಲ ಚಿತ್ರೀಕರಣದ ಪರಿಕರಗಳನ್ನು ಮಾರುವುದು, ಹಂಚುವುದು 15(2) | ಯಾವುದೇ ವ್ಯಕ್ತಿಯು ಮಕ್ಕಳ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸುವುದು, ಅವುಗಳನ್ನು ಹೊಂದಿರುವುದು. ಯಾವುದೇ ರೀತಿಯಲ್ಲಿ ಪ್ರಸಾರಕ್ಕಾಗಿ ಮಗುವನ್ನು ಬಳಸುವುದು, ಅವುಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಗೆ ವರದಿಗಾಗಿ ಮತ್ತು ನ್ಯಾಯಾಲಯದಲ್ಲಿ ಸಾಕ್ಷ್ಯಕ್ಕಾಗಿ ಹೊರತುಪಡಿಸಿ ಇತರರಿಗೆ ಹಂಚುವುದು. | 3 ವರ್ಷಕ್ಕೆ ಕಡಿಮೆಯಲ್ಲದ ಜೈಲು ಮತ್ತು ದಂಡದೊಂದಿಗೆ ಅಥವಾ ಎರಡನ್ನೂ ಸೇರಿಸಿ ಶಿಕ್ಷೆ |
| 9. ಮಗುವನ್ನು ಉಪಯೋಗಿಸಿ ಅಶ್ಲೀಲ ಪರಿಕರಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವುದು15(3) | ಯಾವುದೇ ವ್ಯಕ್ತಿಯು ಮಕ್ಕಳ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸುವುದು, ಅವುಗಳನ್ನು ಹೊಂದಿರುವುದು. ಯಾವುದೇ ರೀತಿಯಲ್ಲಿ ವಾಣಿಜ್ಯ ಉದ್ದೇಶಗಳಿಗೆ ಬಳಸುವುದು | ಮೊದಲ ಬಾರಿಯ ಅಪರಾಧವಾದಲ್ಲಿ 3 ವರ್ಷಕ್ಕೆ ಕಡಿಮೆಯಲ್ಲದ 5 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಅಥವಾ ದಂಡ ಅಥವಾ ಈ ಎರಡೂ ಶಿಕ್ಷೆಗಳನ್ನು ಒಟ್ಟಾಗಿ ನೀಡುವುದು, ಅಪರಾಧವು ಮರುಕಳಿಸಿದರೆ 5 ವರ್ಷಕ್ಕೆ ಕಡಿಮೆಯಲ್ಲದ ಮತ್ತು 7 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಮತ್ತು ದಂಡ |
| 10. ಪ್ರಚೋದನೆ, ಅಪರಾಧವೆಸಗಲು ನೆರವು (ಸೆಕ್ಷನ್ 16) | ಯಾವುದೇ ವ್ಯಕ್ತಿಯನ್ನು ಅಪರಾಧ ಮಾಡುವಂತೆ ಪ್ರಚೋದಿಸುವುದು, ಕುಮ್ಮಕ್ಕು ನೀಡುವುದು, ಅಥವಾ ಅಪರಾಧವೆಸಗಲು ನೆರವು ನೀಡುವ ವ್ಯಕ್ತಿ ಇತರರೊಂದಿಗೆ ಸೇರಿ ಪಿತೂರಿ ನಡೆಸುವುದು. | ಸೆಕ್ಷನ್ 17ರ ಪ್ರಕಾರ ಶಿಕ್ಷೆ ನೀಡಲಾಗುವುದು |
| 11. ಅಪರಾಧ ನಡೆಸಲು ಪ್ರಯತ್ನ ಸೆಕ್ಷನ್ 17 | ಯಾವುದೇ ವ್ಯಕ್ತಿ ಅಪರಾಧವನ್ನು ಮಾಡಲು ಪ್ರಯತ್ನಿಸುವುದು (ಸೆಕ್ಷನ್ 18ರಲ್ಲಿ ವಿವರಿಸಿದಂತೆ) | ಯಾವುದೇ ಅವಧಿಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ನಿಗದಿತ ಜೀವಾವಧಿ ಶಿಕ್ಷೆ ಅಥವಾ ದಂಡ ಅಥವಾ ಜೈಲು ಮತ್ತು ದಂಡದೊಂದಿಗೆ ಶಿಕ್ಷೆ |

**ವಾರಂಟ್ ಇಲ್ಲದೆ ಬಂಧನ**

ಸೂಚನೆ : ಇಲ್ಲಿ ನೀಡಿರುವ ಮಾಹಿತಿಯು ಮೇಲ್ನೈ ಸಾರಾಂಶವಾಗಿದ್ದು, ಕಾನೂನಿನ ಸೂಕ್ತ ಬಳಕೆಗಾಗಿ ಮೂಲ ಗಜೆಟ್ ಪ್ರಕಟಿತ ಮಕ್ಕಳ ಮೇಲಿನ ಲೈಂಗಿಕ ಅಪರಾಧ ರಕ್ಷಣಾ ಕಾಯಿದೆ 2012 ಮತ್ತು ತಿದ್ದುಪಡಿ 2019ನ್ನು ಬಳಸಬೇಕಾಗಿ ವಿನಂತಿ


ಪಡಿ–ಮಂಗಳೂರು, 2ನೇ ಅಡ್ಡರಸ್ತೆ, ಲೋವರ್ ಬೆಂದೂರ್, ಮಂಗಳೂರು – 575 002

ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ: ವೆಬ್‌ಸೈಟ್ – www.padivalored.com ದೂರವಾಣಿ – 0824–2439895


CHILD LINE 1098 NIGHT & DAY

### ಸೆಪ್ಟಂಬರ್ SEPTEMBER 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| | | | 1 | 2 | 3 | 4 |
| 5 Teachers' Day | 6 | 7 | 8 | 9 | World Suicide Prevention day 10 Ganesh Chathurthi | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |


### ಅಕ್ಟೋಬರ್ OCTOBER 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| 31 | | | | | 1 | 2 Gandhi Jayanthi |
| 3 | 4 | 5 | 6 Mahalaya Amavasya | 7 | 8 | 9 |
| 10 | International Day of the Girl Child 11 International Day of Non Violence | 12 | 13 | Mahanavami 14 Ayudha Pooja | 15 Vijaya Dashami | 16 |
| 17 | 18 | 19 Eid-Milad | 20 Valmiki Jayanthi | 21 | 22 | 23 |
| 24 | 25 | 26 | 27 | 28 | 29 | 30 |

ಪರಿಕಲ್ಪನೆ : ಪಡಿ–ವೆಲೊರೆಡ್

# ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಮಕ್ಕಳು





ವಿಶ್ವಸಂಸ್ಥೆ ಮುಂದಿಟ್ಟಿರುವ ಸುಸ್ಥಿರ ಅಭಿವೃದ್ಧಿ ಗುರಿಗಳು (ಎಸ್.ಡಿ.ಜಿ.–SDG-Sustainable Development Goal) ಇಡೀ ಜಗತ್ತಿನ ಸರ್ವತೋಮುಖ ಅಭಿವೃದ್ಧಿಯನ್ನು ಬಯಸುತ್ತದೆ. 17 ಪ್ರಮುಖ ಗುರಿಗಳು 230 ಸೂಚಕಗಳನ್ನು ಹೊಂದಿರುವ ಈ ಎಸ್.ಡಿ.ಜಿ. 2016ರಿಂದ 2030ರವರೆಗೆ ಜಾರಿಯಲ್ಲಿದ್ದು ಹಳ್ಳಿ ಪಟ್ಟಣಗಳಿಂದ ಹಿಡಿದು ಇಡೀ ದೇಶಗಳಿಗೆ ಅನ್ವಯಿಸುತ್ತದೆ. 2016ನೇ ಇಸವಿಯಲ್ಲಿ ಸಹಸ್ರಮಾನ ಗುರಿಗಳನ್ನು ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿ ಎಸ್.ಡಿ.ಜಿ ಎಂಬ ಹೆಸರನ್ನಿಟ್ಟು ಒಟ್ಟು 17 ಗುರಿಗಳನ್ನು ಹೊಂದಿ 2030ರ ಹೊತ್ತಿಗೆ ನಮ್ಮ ದೇಶದಲ್ಲಿ ಜನ ಬಡತನ, ಹಸಿವಿನಿಂದ ಮುಕ್ತರಾಗಿ ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮವನ್ನು ಹೊಂದಿ, ಗುಣಮಟ್ಟದ ಶಿಕ್ಷಣ ಮತ್ತು ಸಮಾನತೆಯನ್ನು ಖಾತರಿಪಡಿಸುತ್ತೇವೆ ಎಂದು ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ ನಾಗರಿಕ ಸಮಾಜ ಈ ಗುರಿಗಳನ್ನು ಈಡೇರಿಸಲು ಕಾರ್ಯಪ್ರವೃತ್ತರಾಗಬೇಕಿದೆ.

ಈ ಗುರಿಗಳು ಭೂಮಿಯ ರಕ್ಷಣೆ, ಜನರ ಅಭಿವೃದ್ಧಿ, ಸಮೃದ್ಧಿ, ಸಹಕಾರವನ್ನು ಹೆಚ್ಚಿಸಿ ಶಾಂತಿ ನೆಲೆಸುವಂತೆ ಮಾಡುವ ಉದ್ದೇಶವನ್ನು ಹೊಂದಿದೆ. ಈ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಜಾರಿಗೊಳಿಸಲು ಭಾರತ ಸರ್ಕಾರವೂ ಬದ್ಧವಾಗಿದೆ. ನಮ್ಮ ದೇಶಕ್ಕೂ ಅನ್ವಯಿಸುತ್ತದೆ ಎಂದ ಮೇಲೆ ಅದು ದೇಶದ ಪ್ರತಿಯೊಬ್ಬ ಪ್ರಜೆಗೂ ಸೇರಿದ್ದು. ಅದೇ ರೀತಿ ಎಲ್ಲ ಮಕ್ಕಳು, ಹದಿವಯಸ್ಕರು, ಯುವಕರು, ವೃದ್ಧರಿಗೂ ಈ ಎಸ್.ಡಿ.ಜಿ. ಅಂಶಗಳು ಸೇರಿದ್ದಾಗಿದೆ.

1 ಬಡತನದಿಂದ ಮುಕ್ತಿ
2 ಹಸಿವು ಮುಕ್ತ
3 ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
4 ಗುಣಮಟ್ಟದ ಶಿಕ್ಷಣ
5 ಲಿಂಗ ಸಮಾನತೆ
6 ಸ್ವಚ್ಛ ನೀರು ಮತ್ತು ನೈರ್ಮಲ್ಯ
7 ಕೈಗೆಟುಕಬಹುದಾದ ಮತ್ತು ಶುದ್ಧ ಇಂಧನ ಶಕ್ತಿ
8 ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ
9 ಉದ್ಯಮ ಆವಿಷ್ಕಾರ ಮತ್ತು ಮೂಲಸೌಕರ್ಯ
10 ಅಸಮಾನತೆಗಳ ಇಳಿಕೆ
11 ಸುಸ್ಥಿರ ನಗರಗಳು ಮತ್ತು ಸಮುದಾಯಗಳು
12 ಸುಸ್ಥಿರ ಬಳಕೆ ಮತ್ತು ಉತ್ಪಾದನೆ
13 ಹವಾಮಾನ ಕ್ರಮ
14 ಜಲದಡಿಯ ಜೀವರಾಶಿ
15 ಭೂಮಿ ಮೇಲಿನ ಜೀವಜಾಲ
16 ಶಾಂತಿ, ನ್ಯಾಯ ಮತ್ತು ದೃಢ ಸಂಸ್ಥೆಗಳು
17 ಗುರಿಗಳಿಗಾಗಿ ಸಹಭಾಗಿತ್ವ

SUSTAINABLE DEVELOPMENT GOALS

## ಮಕ್ಕಳಿಗೆ ನೇರವಾಗಿ ಅನ್ವಯವಾಗುವ ಎಸ್.ಡಿ.ಜಿ.ಯ 12 ಗುರಿಗಳು











- ಗುರಿ 1: ಬಡತನದಿಂದ ಮುಕ್ತಿ
- ಗುರಿ 2: ಹಸಿವು ಮುಕ್ತ
- ಗುರಿ 3: ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
- ಗುರಿ 4: ಗುಣಮಟ್ಟದ ಶಿಕ್ಷಣ
- ಗುರಿ 5: ಲಿಂಗ ಸಮಾನತೆ
- ಗುರಿ 6: ಸ್ವಚ್ಛ ನೀರು ಮತ್ತು ನೈರ್ಮಲ್ಯ
- ಗುರಿ 7: ಕೈಗೆಟುಕಬಹುದಾದ ಮತ್ತು ಶುದ್ಧ ಇಂಧನ ಶಕ್ತಿ
- ಗುರಿ 8: ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ
- ಗುರಿ 11 ಸುಸ್ಥಿರ ವಸತಿ ಪ್ರದೇಶಗಳು ಮತ್ತು ಸಮುದಾಯಗಳು
- ಗುರಿ 10: ಅಸಮಾನತೆಗಳ ಇಳಿಕೆ
- ಗುರಿ 13: ಹವಾಮಾನ ಕ್ರಮ
- ಗುರಿ 16: ಶಾಂತಿ, ನ್ಯಾಯ ಮತ್ತು ದೃಢ ಸಂಸ್ಥೆಗಳು


ಪಡಿ–ಮಂಗಳೂರು, 2ನೇ ಅಡ್ಡರಸ್ತೆ, ಲೋವರ್ ಬೆಂದೂರ್, ಮಂಗಳೂರು – 575 002
ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ: ವೆಬ್‌ಸೈಟ್ – www.padivalored.com ದೂರವಾಣಿ – 0824–2439895


CHILD LINE 1098 NIGHT & DAY

### ನವೆಂಬರ್ NOVEMBER 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| | 1 Karnataka Rajyotsava | 2 | 3 Naraka Chathurdashi | 4 Deepavali | 5 Balipadyami | 6 |
| 7 | 8 | 9 | 10 | 11 | 12 | 13 |
| 14 Children's Day | 15 | 16 | 17 International Students day | 18 | 19 World day for the prevention of child abuse | 20 Universal Children's Day |
| 21 | 22 Kanakadasa Jayanthi | 23 | 24 | 25 | 26 | 27 |
| 28 | 29 | 30 | | | | |

### ಡಿಸೆಂಬರ್ DECEMBER 2021

| ಆದಿತ್ಯವಾರ Sunday | ಸೋಮವಾರ Monday | ಮಂಗಳವಾರ Tuesday | ಬುಧವಾರ Wednesday | ಗುರುವಾರ Thursday | ಶುಕ್ರವಾರ Friday | ಶನಿವಾರ Saturday |
|---|---|---|---|---|---|---|
| | | | 1 World AIDS Day | 2 | 3 International Day of Persons with Disability | 4 |
| 5 | 6 | 7 | 8 | 9 | 10 Human Rights Day | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 Christmas |
| 26 | 27 | 28 | 29 | 30 | 31 | |

ಪರಿಕಲ್ಪನೆ : ಪಡಿ–ವೆಲೊರೆಡ್